**ಓ.ಎಸ್ ನಂ.162/2021**
**ಡಿ.ಡಬ್ಲೂಃ 1**

**ಇಂದು ದಿನಾಂಕ 24.01.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಪರ ವಕೀಲರಿಂದ**

ನಾನು ದ್ವಿತೀಯ ಪಿಯುಸಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ಈ ದಾವೆಯನ್ನು ನನ್ನ ವಿರುದ್ದ ಯಾರು ಸಲ್ಲಿಸಿದ್ದಾರೆ ಎಂದು ಗೊತ್ತು. ಒಬ್ಬ ಸ್ವಮೀಯಾರು ನಮ್ಮ ವಿರುದ್ದ ದಾವೆ ಸಲ್ಲಿಸಿದ್ದಾರೆ. ಅವರ ಹೆಸರು ಬಸಯ್ಯ ಗುರಯ್ಯ ಹಿರೇಮಠ ಎಂದು ಇದೆ.

1 ನೇ ಪ್ರತಿವಾದಿಗೆ ಎಷ್ಟ ಜನ ಮಕ್ಕಳು ಇದ್ದಾರೆ ನನಗೆ ಗೊತ್ತಿಲ್ಲ ಒಬ್ಬ ಗಂಡು ಮಗ ಉಳಿದರು ಹೆಣ್ಣು ಮಕ್ಕಳು ಇರುತ್ತಾರೆ. 1 ನೇ ಪ್ರತಿವಾದಿಯ ಗಂಡು ಮಗನ ಹೆಸರು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಮಗನ ಹೆಸರು ಚಿದಾನಂದ ಎಂದರೆ ಸರಿ.

1 ನೇ ಪ್ರತಿವಾದಿ ಕಡೆಯಿಂದ ನಾನು ಜಮೀನು ಖರೀದಿಸಿದ್ದೇನೆ. ನಾನು 6 ಎಕರೆ 20 ಗುಂಟೆ ಕ್ಷೇತ್ರದ ಜಮೀನನ್ನು 1 ನೇ ಪ್ರತಿವಾದಿ ಕಡೆಯಿಂದ ಖರೀದಿಸಿದ್ದೇನೆ. ಅದು ಒಟ್ಟು ಕ್ಷೇತ್ರ 14 ಎಕರೆ ಇರಬಹುದು. ನಾನು 1 ನೇ ಪ್ರತಿವಾದಿಯಿಂದ ಜಮೀನು ಎಷ್ಟು ರೂಪಾಯಿ ಖರೀದಿಸಿದೆ ಎಂದು ಬಹಳ ದಿನಗಳಾದ ಕಾರಣ ನನಗೆ ನೆನಪಿಲ್ಲ.

ನಾನು ಖರೀದಿಸಿದ ಜಮೀನಿನ ಚೆಕ್ ಬಂದಿ ಹೇಳಬಲ್ಲೆ. ಪೂರ್ವಕ್ಕೆ ದುಂಡ್ಯಯ ಚೊರಗಿಮಠ ರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತರಕ್ಕೆ 1 ನೇ ಪ್ರತಿವಾದಿಯ ಉಳಿದ ಜಮೀನು ಮತ್ತು ದಕ್ಷಿಣಕ್ಕೆ ಈರಪ್ಪ ಸದಲಾಪುರ ರವರ ಜಮೀನು. ನಾನು ಜಮೀನು ಖರೀದಿಸುವ ಮೊದಲು 1 ನೇ ಪ್ರತಿವಾದಿಯೊಂದಿಗೆ ಕ್ರಯದ ಕರಾರು ಪತ್ರ ಮಾಡಿಕೊಂಡಿರಲಿಲ್ಲ. ಇಂಡಿ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ 1 ನೇ ಪ್ರತಿವಾದಿಯಿಂದ ನೊಂದಾಯಿತ ಕ್ರಯ ಪತ್ರ ಮಾಡಿಕೊಂಡಿದ್ದೇನೆ. ಖರೀದಿ ಸಂದರ್ಭದಲ್ಲಿ 1ನೇ ಪ್ರತಿವಾದಿಯ ಮತ್ತು ನಾನು ಸೇರಿ ಬಸಣ್ಣ ಪಾಟೀಲ ಮತ್ತು ಮಡ್ಯಪ್ಪ ಗಡಗಲಿ ರವರು ಕರೆದುಕೊಂಡು ಹೋಗಿದ್ದೇವು. 1 ನೇ ಪ್ರತಿವಾದಿಯೊಂದಿಗೆ ಅವನ ಹೆಂಡತಿ ಶಾಂತಾಬಾಯಿ ಮತ್ತು ಅವರ ಮಗ ಸಹ ಬಂದಿದ್ದರು.

1 ನೇ ಪ್ರತಿವಾದಿಗೆ ಆ ಜಮೀನು ಹೇಗೆ ಬಂದಿತ್ತು ನನಗೆ ಗೊತ್ತಿಲ್ಲ. ಅದನ್ನು ಖರೀದಿಸುವ ಮೊದಲು ನಾನು 1 ನೇ ಪ್ರತಿವಾದಿಗೆ ಆ ಜಮೀನು ಹೇಗೆ ಬಂತು ಎಂದು ವಿಚಾರಣೆ ಮಾಡಿಲ್ಲ. ನಾನು ಖರೀದಿಸಿದ ಜಮೀನು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಜಮೀನು ಎಂದರೆ ಸರಿ. ನಾನು ಖರೀದಿಸುವ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಗ ಸೇರಿ

ಖರೀದಿ ಪತ್ರಕ್ಕೆ ಸಮ್ಮತಿ ಸಾಕ್ಷಿ ಸಹಿ ಮಾಡಿದ್ದಾರೆ. ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳು ಸಹಿ ಮಾಡಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿಯು ನನಗೆ ಜಮೀನು ಮಾರುವ ಸಂದರ್ಭದಲ್ಲಿ ಸರಾಯಿ ಕುಡಿಯುವುದು ಮತ್ತು ತಿನ್ನುವ ಚಟ್ಟ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ನನ್ನ ಬಳಿ ಬಂದು ಮಕ್ಕಳ ಮದುವೆಗೆ ಹಣದ ಅವಶ್ಯಕತೆ ಇದೆ ಜಮೀನು ತಗೆದುಕೊಳ್ಳಿ ಎಂದು ಬಂದಿದ್ದರಿಂದ ಅವರು ಮಾರಾಟಕ್ಕೆ ತಗೆದ ಬಗ್ಗೆ ಗೊತ್ತು. 1 ನೇ ಪ್ರತಿವಾದಿಯು ಮಕ್ಕಳ ಮದುವೆಯನ್ನು ಚೊರಗಿ ಮಠದಲ್ಲಿ ಮಾಡಿಕೊಂಡು ಬಂದಿದ್ದಾರೆ. ಚೊರಗಿ ಮಠದಲ್ಲಿ ಕೇವಲ 25–30 ಸಾಮಿರ ರೂಪಾಯಿಯಲ್ಲಿ ಮದುವೆಯಾಗುತ್ತದೆ ಎಂದರೆ ಸಾಕ್ಷಿಯು ಅದಕ್ಕೆ ನಾನು ಏನೂ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ತನ್ನ ಮಕ್ಕಳ ಮದುವೆ ಮಾಡಲು ಯಾವುದೇ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಖರೀದಿಸಿದ ಜಮೀನು ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಗೆ 2 ಬಾರಿ ಪ್ರಶ್ನೆ ಕೇಳಿದರು ಸಹ ಯಾವುದೇ ಉತ್ತರ ನೀಡಿರುವುದಿಲ್ಲ.

1 ನೇ ಪ್ರತಿವಾದಿಯು ಜಮೀನು ವಿಚಾರವಾಗಿ ನನ್ನ ವಿರುದ್ದ ಒಂದು ದಾವೆ ಸಲ್ಲಿಸಿದ್ದ ಎಂದರೆ ಸರಿ. ಅದರಲ್ಲಿ 1 ನೇ ಪ್ರತಿವಾದಿಯ ಮಕ್ಕಳನ್ನು ಸೇರಿಸಿರಲಿಲ್ಲ ಎಂದರೆ ಸರಿ.

ನಮ್ಮೂರಲ್ಲಿ ಜಮೀನು ಒಂದು ಎಕರೆಗೆ ಈಗ ಎಷ್ಟು ಬೆಲೆ ಬಾಳುತ್ತದೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಸರಾಯಿ ಕಡಿಯುವ ಚಟ ಇರುವುದರಿಂದ ಆತನಿಗೆ ಮೋಸ ಮಾಡಿ ನೊಂದಣಿ ಕಚೇರಿಗೆ ಕರೆದುಕೊಂಡು ಹೋಗಿ ಸಹಿ ಪಡೆದಿದ್ದೇವೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ.

**<u>ಪಾಟೀ ಸವಾಲುಃ 3 ಮತ್ತು 4 ಪ್ರತಿವಾದಿಪರ ವಕೀಲರಿಂದ</u>**

3 ಮತ್ತು 4 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಮಕ್ಕಳು ನಾನು ಜಮೀನು ಖರೀದಿಸುವಾಗ ಅವರು ಚಿಕ್ಕವರು ಇದ್ದರು. 1 ನೇ ಪ್ರತಿವಾದಿಯ ಆಸ್ತಿಯಲ್ಲಿ 3 ಮತ್ತು 4 ನೇ ಪ್ರತಿವಾದಿಯರಿಗೂ ಬಾಗ ಬರುತ್ತದೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡದೆ ಸುಮ್ಮನೆ ನಿಂತಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ.
ಇಂಡಿ.